**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 8/2025** **ಅಸಾ.20**
**ಬಾಸಾ.33**

| | | |
|---|---|---|
| ಸಾಕ್ಷಿದಾರರ ಹೆಸರು | - | ಎಸ್.ಗಣರಾಜ್ ಭಟ್ |
| ತಂದೆಯ ಹೆಸರು | - | ಎ.ಕೃಷ್ಣ ಭಟ್ |
| ವಯಸ್ಸು | - | 55 ವರ್ಷ |
| ಉದ್ಯೋಗ | - | ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ |
| ವಿಳಾಸ | - | ಉಡುಪಿ. |

ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2010 ರಿಂದ ಇಲ್ಲಿಯವರೆಗೆ ಉಡುಪಿಯ ಮೆಸ್ಕಾಂ ಇಲಾಖೆಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದ ತನಿಖಾಧಿಕಾರಿಯವರು ದಿನಾಂಕ 19.02.2025 ರಂದು ಸ್ಥಾವರ ಸಂಖ್ಯೆ ಯುಡಿಪಿ 54700 ಇದರ ಸಂಪರ್ಕದ ವೇಳೆ ಕೊಟ್ಟ ದಾಖಲೆಗಳ ವಿವರ ನೀಡುವಂತೆ ಕೋರಿದ್ದು, ಆ ಪ್ರಕಾರ ನಮ್ಮ ಕಡತದಲ್ಲಿದ್ದ ನಿರಾಕ್ಷೇಪಣಾ ಪತ್ರದ ಪ್ರತಿ ಮತ್ತು ಹಿಂಬರಹದ ಪ್ರತಿಯನ್ನು ಒಂದು ಕವಚ ಪತ್ರದೊಂದಿಗೆ ತನಿಖಾಧಿಕಾರಿಯವರಿಗೆ ದಿನಾಂಕ 01.03.2025 ರಂದು ನೀಡಿರುತ್ತೇನೆ. ತನಿಖಾಧಿಕಾರಿ ಕೊಟ್ಟ ಪತ್ರ, ಕವಚ ಪತ್ರ, ನಿರಾಕ್ಷೇಪಣಾ ಪತ್ರ ಮತ್ತು ಹಿಂಬರಹ ದಾಖಲೆಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ-29 ರಿಂದ 32 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ. ವಕೀಲರಿಂದಃ**

ನಿಪಿ-29 ರಲ್ಲಿ ಯಾವ ಸ್ಥಾವರ ದಾಖಲೆ ಬೇಕು ಎಂದು ವಿವರ ಕೊಟ್ಟಿದ್ದಾರೆ. ಸ್ಥಾವರಕ್ಕೆ ನಾನು ಭೇಟಿ ನೀಡಿಲ್ಲ. ನಿಪಿ-30 ರಿಂದ 32 ತಕ್ಷೀರು ಸ್ಥಳಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.

ಪೋಲಿಸರು ನೀಡಿರುವ ಮಾಹಿತಿ ಆಧಾರದ ಮೇಲೆ ಸುಳ್ಳು ದಾಖಲೆಗಳನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ -ಇಲ್ಲ-**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ